**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.821/2024**

| | | |
|---|---|---|
| ಸಾಕ್ಷಿದಾರರ ಹೆಸರು | : ಕೃಷ್ಣಮೂರ್ತಿ | ಪ್ರಾಸಾ -3 |
| ತಂದೆಯ ಹೆಸರು | : ರಾಮಯ್ಯ | ಚಾಸಾ-4 |
| ವಯಸ್ಸು | : 68 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಸಾಯ | ದಿನಾಂಕಃ05.02.2025 |
| ವಾಸಸ್ಥಳ | : ಕೋಣಂಬಿ, ಕೊಪ್ಪ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಪರಿಚಯ ಇದೆ. ಅವರು ಲಾರಿ ಚಾಲಕ. ಮೃತ ವಿಶ್ವೇಂದ್ರ ನನ್ನ ಮಗ. ಚಾಸಾ-1 ರವರ ಪರಿಚಯ ನನಗಿಲ್ಲ.

ದಿ.02.11.2023 ರಂದು ಬೆಳಗ್ಗೆ 9.30 ಕ್ಕೆ ವಿಶ್ವೇಂದ್ರ ರವರು ಧರ್ಮಸ್ಥಳ ಮತ್ತು ಕುಕ್ಕೆ ಸುಬ್ರಮಣ್ಯ ಕಡೆ ಹೋಗುತ್ತೇನೆ ಎಂದು ತನ್ನ ಬೈಕ್ ನೋ.ಸಂ.KA-18-1753 ವಾಹನದಲ್ಲಿ ಹೊರಟು ಉಜಿರೆಯ ಸೂರ್ಯ ದೇವಸ್ಥಾನ ಬಳಿ ಇರುವುದಾಗಿ ದಿ.03.11.2023 ರಂದು ನನಗೆ ಫೋನ್ ಮೂಲಕ ತಿಳಿಸಿದ್ದರು. ದಿ.04.11.2023 ರಂದು ಸ.7.00 ಗಂಟೆ ಸಮಯಕ್ಕೆ ಮೂಡಿಗೆರೆ ಪೋಲಿಸರು ನನ್ನ ಪತ್ನಿಗೆ ಕರೆ ಮಾಡಿ ನನ್ನ ಮಗ ಮತ್ತು ಚಾಸಾ-1 ರವರು ಮೂಡಿಗೆರೆಯ ಬಿದರಹಳ್ಳಿ KSRTC ಡಿಪೋ ಎದುರು ಹೋಗುತ್ತಿರುವಾಗ ಅವರು ಮೃತಪಟ್ಟಿರುತ್ತಾರೆ ಎಂದು ತಿಳಿಸಿ ನಮ್ಮನ್ನು ಬರುವಂತೆ ತಿಳಿಸಿದರು. ನಾವು ಮನೆಯಿಂದ ಮೂಡಿಗೆರೆ ಆಸ್ಪತ್ರೆ ತಲುಪುವಾಗ ರಾ.10.00 ರಿಂದ 10.30 ರ ಸಮಯವಾಗಿತ್ತು. ನನ್ನ ಮಗನ ಮೃತ ದೇಹವನ್ನು ಇರಿಸಲಾಗಿತ್ತು. ಪೊಲಿಸರು ಮತ್ತು ಅಲ್ಲಿದ್ದವರನ್ನು ವಿಚಾರ ಮಾಡಿದಾಗ ಮೇಲೆ ಹೇಳಿದ ಸ್ಥಳದಲ್ಲಿ ದನ ಅಡ್ಡಬಂದ ಕಾರಣ ಬೈಕ್ ನಿಧಾನ ಮಾಡಿದಾಗ ಬೈಕ್ ಬಿದ್ದಿತ್ತು ಲಾರಿ ಚಾಲಕನು ಅತೀವೇಗವಾಗಿ ಬಂದು ಬೈಕ್ ಮತ್ತು ನನ್ನ ಮಗನ ಮೇಲೆ ಹತ್ತಿಸಿಕೊಂಡು ಹೋದರು ಎಂದು ತಿಳಿದುಬಂತು. ಮರುದಿನ ಬೆ.9.00 ರಿಂದ 11.30 ರ ಸಮಯಕ್ಕೆ ನನ್ನ ಮಗನ ಮೃತದೇಹದ ಪಂಚನಾಮೆ ಜರುಗಿಸಿ ಪೋಟೋ ತೆಗೆದಿದ್ದಾರೆ. ಪೋಲಿಸರು 0116 ಸಂಖ್ಯೆಯ ಸಿಲಿಂಡರ್ ತುಂಬಿದ ಲಾರಿಯನ್ನು ತೋರಿಸಿ ಅಪಘಾತಪಡಿಸಿದ ಲಾರಿ ಇದೆ ಎಂದು ತೋರಿಸಿದರು. ಸಾಕ್ಷಿಯು ನಿಪಿ-2 ರ ಪೋಟೋದಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನನ್ನ ಮಗನ ಬೈಕ್ ನ ನೋ.ಸಂ.KA-18-EJ-1753 ಎಂದರೆ ನನಗೆ ನೆನಪಾಗುತ್ತಿಲ್ಲ. ಪೋಲಿಸರು ಹೇಳಿದ ಲಾರಿಯ ನೋ.ಸಂ. KA-66-0117 ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಡಿ.ಎಸ್. ವಕೀಲರಿಂದಃ**

ಚಾಸಾ-1 ರವರ ಪರಿಚಯ ನನಗಿಲ್ಲ. ಚಾಸಾ-1 ರವರು ಕೊಟ್ಟಿರುವ ದೂರನ್ನು ನಾನು ಓದಿಲ್ಲ.

ದಿ.02.11.2023 ರಂದು ಧರ್ಮಸ್ಥಳ ದೇವಸ್ಥಾನಕ್ಕೆ ಹೋಗಿ ಆ ದಿನ ಅಲ್ಲಿಯೇ ಉಳಿದುಕೊಂಡಿದ್ದೆವು ಎಂದು ದೂರಿನಲ್ಲಿ ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಮುಂದುವರೆದು ದಿ.04.11.2023 ರಂದು ಮಧ್ಯಾಹ್ನ ಧರ್ಮಸ್ಥಳದಿಂದ ಹೊರಟು ಕೊಟ್ಟಿಗೆಹಾರಕ್ಕೆ ಬರಲಾಗಿದೆ ಎಂದು ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ದಿ.02.11.2023 ರಂದು ನನ್ನ ಮಗ ಧರ್ಮಸ್ಥಕ್ಕೆ ಹೋಗಿ ದಿ.04.11.2023 ರಂದು ಬರುತ್ತಿದ್ದರು ಎಂದು ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ. ನಾನು ಮತ್ತು ನನ್ನ ಮಗ ಪ್ರತ್ಯೇಕವಾಗಿ ವಾಸವಿದ್ದೆವು. ಯಾರೊಂದಿಗೆ ಹೋಗಿರುವುದಾಗಿ ನಾನು ನನ್ನ ಮಗನನ್ನು ವಿಚಾರ ಮಾಡಿಲ್ಲ. ಚಾಸಾ-1 ರವರ ದೂರು ಹಾಗೂ ನನ್ನ ಹೇಳಿಕೆಯಲ್ಲಿನ ಅಂಶಗಳು ಒಂದೇ ರೀತಿ ಇರುವ ಕಾರಣ ಚಾಸಾ-1 ಮತ್ತು ನನ್ನ ಮಗನ ನಡುವೆ ಸಂಬಂಧ ಇತ್ತು ಎಂದರೆ ನನಗೆ ಗೊತ್ತಿಲ್ಲ.

ನಾನು ಮೂಡಿಗೆರೆಗೆ ಬಂದಾಗ ಚಾಸಾ-1 ರವರನ್ನು ಮಾತನಾಡಿಸಿಲ್ಲ. ಚಾಸಾ-1 ರವರು ಆ ದಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗನೋಂದಿಗೆ ಯಾರು ಇದ್ದರು ಎಂದು ನಾನು ಪೋಲಿಸರ ಬಳಿ ತಿಳಿದುಕೊಂಡಿದ್ದೆ. ಆ ದಿನ ಚಾಸಾ-11 ರವರು ನನ್ನೊಂದಿಗೆ ಬಂದಿರಲಿಲ್ಲ. ನಾನು ಮೂಡಿಗೆರೆಗೆ ಬರುವಾಗ ಚಾಸಾ-11 ರವರನ್ನು ನನ್ನೊಂದಿಗೆ ಕರೆದುಕೊಂಡು ಬರಲು ಪ್ರಯತ್ನಿಸಲಿಲ್ಲ. ಪೋಲಿಸರು ನನಗೆ ಕರೆ ಮಾಡಿದ ಬಗ್ಗೆ ಯಾವುದೇ ದಾಖಲೆ ಇಲ್ಲ. ನನ್ನ ಮೊಬೈಲ್ ನಂಬರ್ ಹೇಗೆ ಸಿಕ್ಕಿತು ಎಂದು ಪೋಲಿಸರ ಬಳಿ ಕೇಳಿದಾಗ ರೋಟರಿ ಕ್ಲಬ್ ಮುಖಾಂತರ ಸಿಕ್ಕಿರಬಹುದು. ಪೋಲಿಸರಿಗೆ ನಾನೇ ಕರೆ ಮಾಡಿರಲಿಲ್ಲ. ಚಾಸಾ-1 ರವರನ್ನು ಬೇಟಿ ಮಾಡಿ ನನ್ನ ಮಗನೊಂದಿಗೆ ಯಾಕೆ ಮತ್ತು ಎಲ್ಲಿಗೆ ಹೋಗಿದ್ದೆ ಎಂದು ಕೇಳಲು ಪ್ರಯತ್ನಿಸಿಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಅಪಘಾತದ ವಿಷಯವನ್ನು ಪೋಲಿಸರು ನನಗೆ ಹೇಳಿದ್ದಾರೆ ಎಂದರೆ ಸರಿ. ನಾನು ವೈಯಕ್ತಿಕವಾಗಿ ಘಟನೆಯನ್ನು ನೋಡಿಲ್ಲ.

ಮೃತರು ನನ್ನ ಮಗನಾದ ಕಾರಣ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಪೋಲಿಸ್ ಠಾಣೆಯಲ್ಲಿ ನೋಡಿದ್ದೆ. ಅಲ್ಲಿ ನಮ್ಮಿಬ್ಬರ ಪೋಟೋ ತೆಗೆದಿಲ್ಲ. ಆರೋಪಿ ಮತ್ತು ಲಾರಿಯನ್ನು ನೋಡಿರುವ ಬಗ್ಗೆ ಹೇಳಿಕೆ ಕೊಟ್ಟಿಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.